ಸಮಯ ಮಗುವಿಗೆ ಇದೆಯೇ ಎನ್ನುವುದನ್ನು ಕಂಡುಕೊಳ್ಳಬೇಕು. ಶಾಲೆ–ಕಾಲೇಜುಗಳ ತರಗತಿಗಳಿಗೆ ಹಾಜರಾತಿ ಕಡ್ಡಾಯ. ನಂತರದ ಬಿಡುವಿನಲ್ಲಷ್ಟೇ ಟ್ಯೂಷನ್‌ಗೆ ಹೋಗಬಹುದು. ಇದೆಲ್ಲದರ ನಂತರ ಮಗುವಿಗೆ ಓದಲಿಕ್ಕೆ ಸಮಯ ದೊರಕುತ್ತದೆಯೇ ಎನ್ನುವುದನ್ನು ಪೋಷಕರು ಗಮನಿಸಬೇಕು. ಶಾಲೆಯೊಂದು ಕಡೆ, ಟ್ಯೂಷನ್ ಮತ್ತೊಂದು ಕಡೆ ಎಂದಾದರೆ, ಹೋಗಿಬರುವುದರಲ್ಲೇ ವಿದ್ಯಾರ್ಥಿಗಳ ಅಮೂಲ್ಯ ಸಮಯ ಕಳೆದುಹೋಗುತ್ತದೆ. ಶಾಲೆ–ಟ್ಯೂಷನ್‌ನಲ್ಲೇ ಇಡೀ ದಿನದ ಸಮಯ ಕಳೆದರೆ, ಮನೆಯಲ್ಲಿ ಅಭ್ಯಾಸ ಮಾಡಲು ಮಕ್ಕಳಿಗೆ ಸಮಯ ದೊರೆಯುವುದೇ ಇಲ್ಲ. ಹಾಗಾಗಿ, ಟ್ಯೂಷನ್ ಮಕ್ಕಳಿಗೆ ಹೊರೆಯಾಗದಂತೆ ನೋಡಿಕೊಳ್ಳುವುದು ಪೋಷಕರ ಜವಾಬ್ದಾರಿ.

### ಮೊಬೈಲ್ ಬೇಕೆ? ಏಕೆ?

ಮೊಬೈಲ್ ಹಾಗೂ ಗ್ಯಾಜೆಟ್‌ಗಳು ಅತ್ಯಾಧುನಿಕ ಜೀವನಶೈಲಿಯ ಭಾಗ. ಕೊರೊನಾ ತೀವ್ರತೆಯ ಅವಧಿಯಲ್ಲಿ ಆನ್‌ಲೈನ್ ತರಗತಿಗಳ ಅನುಕೂಲಕ್ಕೆ ಆ್ಯಂಡ್ರಾಯ್ಡ್ ಮೊಬೈಲ್, ಟ್ಯಾಬ್, ಲ್ಯಾಪ್‌ಟಾಪ್‌ಗಳನ್ನು ಮಕ್ಕಳಿಗೆ ಅನಿವಾರ್ಯವಾಗಿ ಪರಿಚಯಿಸಿದ್ದೇವೆ. ಮಕ್ಕಳಿಗೆ ಮೊಬೈಲ್ ಬಳಕೆ ಹಿತಕರವಲ್ಲ ಎನ್ನುವುದನ್ನು ತಿಳಿದೂ, ಅದನ್ನು ಎಳೆಯರ ಕೈಗೆ ಕೊಟ್ಟಿದ್ದೇವೆ. ಅದರಿಂದಾಗಿ, ಕೆಲವು ವಿದ್ಯಾರ್ಥಿಗಳು ಮೊಬೈಲ್ ವ್ಯಸನಿಗಳಾಗಿದ್ದಾರೆ. ಪ್ರಸ್ತುತ ಮಕ್ಕಳನ್ನು ಗ್ಯಾಜೆಟ್‌ಗಳಿಂದ ದೂರವಿರಿಸುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಒಂದಂತೂ ನಿಜ. ಮನೆಮಂದಿಯೆಲ್ಲ ಮೊಬೈಲ್ ಬಳಸುವಾಗ, ಕಿರಿಯರಿಗೆ ನಿರ್ಬಂಧಿಸುವುದು ಆಗದ ಮಾತು. ಹಾಗಾಗಿ, ಮೊಬೈಲ್ ಬಳಕೆಗೆ ನಿಯಂತ್ರಣ ಹೇರುವುದಷ್ಟೇ ಉಳಿದಿರುವ ಸಾಧ್ಯತೆ.

ದಿನದಿಂದ ಒಂದಿಷ್ಟು ನಿಮಿಷಗಳ ಕಾಲ ಮನರಂಜನೆಯ ರೂಪದಲ್ಲಿ ಮಕ್ಕಳು ಮೊಬೈಲ್ ಬಳಸಲು ಪೋಷಕರು ಅವಕಾಶ ಕಲ್ಪಿಸಬಹುದು. ಶೈಕ್ಷಣಿಕ ವಿಷಯಗಳ ಹೆಚ್ಚುವರಿ ಮಾಹಿತಿಗೆ ಇಂಟರ್ನೆಟ್ ಬಳಸುವ ಅಭ್ಯಾಸ ಒಳ್ಳೆಯದು. ಆದರೆ, ಮೊಬೈಲ್ ಬಳಕೆಗೆ ಸ್ವಯಂ ನಿಯಂತ್ರಣವನ್ನು ಹಾಕಿಕೊಳ್ಳುವುದು ಅಗತ್ಯ.

### ಪತ್ರಿಕೆಗಳ ಗೆಳೆತನ ಬೆಳೆಸಿ

ವೃತ್ತಪತ್ರಿಕೆ ಹಾಗೂ ನಿಯತಕಾಲಿಕೆಗಳು ಬರಹದ ಕೌಶಲ್ಯ ಮತ್ತು ಭಾಷಾಸಂಪತ್ತನ್ನು ವೃದ್ಧಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಕರಿಸುತ್ತವೆ. ದಿನಪತ್ರಿಕೆಗಳನ್ನು ಓದಲಿಕ್ಕೆ ವಿದ್ಯಾರ್ಥಿಗಳು ಸಮಯದ ಅಭಾವ ಮಾಡಿಕೊಳ್ಳಬಾರದು. ಅವು ಒಬ್ಬ ವಿದ್ಯಾರ್ಥಿಗೆ ಬೇಕಾದ ಹಾಗೂ ಬೇಡವಾದ ಸಂಗತಿಗಳನ್ನು ತಿಳಿಸುತ್ತವೆ. ಅನವಶ್ಯಕ ಅನಿಸುವ ಪುಟಗಳನ್ನು ಹೊರತುಪಡಿಸಿ ವಿದ್ಯಾರ್ಥಿಗಳು ಸಮಕಾಲೀನ ವಿಷಯಗಳ ವಿಮರ್ಶೆ–ವಿಶ್ಲೇಷಣೆ, ಅಂಕಿ ಅಂಶಗಳ ವಿವರಣೆ ಮತ್ತು ಪ್ರಚಲಿತ ವಿದ್ಯಮಾನಗಳ ವಿವರಗಳನ್ನು ತಪ್ಪದೇ ಓದಬೇಕು.

### ಪಾಠದೊಂದಿಗಿರಲಿ ಆಟೋಟ

ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ವಿದ್ಯಾರ್ಥಿಯೊಬ್ಬನ ವ್ಯಕ್ತಿತ್ವ ರೂಪಿಸಲು ಪೂರಕವಾಗುತ್ತವೆ. ಯಾವಾಗಲೂ ಓದುವುದರಲ್ಲೇ ಮುಳುಗಿಹೋದರೆ ಬೌದ್ಧಿಕ, ಭೌತಿಕ ಹಾಗೂ ಮಾನಸಿಕ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಹಾಗಾಗಿ, ಸಮಯ ಸಿಕ್ಕಾಗ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ಉತ್ತಮ.

ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ

### ರಾತ್ರಿಯೆಲ್ಲ ಓದುವ ಅಗತ್ಯವಿಲ್ಲ...



**ಭೀಮನಗೌಡ ಬಿರಾದರ ಪಾಟೀಲ**
ತಂದೆ: ಹನುಮನಗೌಡ ಪಾಟೀಲ
ಅಮ್ಮ: ರೇಖಾ
ಅಂಕ: 625 (ಎಸ್‌ಎಸ್‌ಎಲ್‌ಸಿ)
ವಿದ್ಯಾಸಂಸ್ಥೆ: ಆಕ್ಸ್‌ಫರ್ಡ್ ಆಂಗ್ಲ ಮಾಧ್ಯಮ ಪ್ರೌಢಶಾಲೆ, ನಾಗರಬೆಟ್ಟ

**ಗೆದ್ದವರ ಮಾತು**

ನಮ್ಮದು ಕೃಷಿ ಕುಟುಂಬ. ನಮ್ಮೂರಲ್ಲಿ ಮೂಲ ಸೌಕರ್ಯ ಇರಲಿಲ್ಲ. ಈ ಕಾರಣಕ್ಕೆ ಹಾಸ್ಟೆಲ್‌ಗೆ ಸೇರಿಸಿದರು. ನಾಗರಬೆಟ್ಟದ 'ಆಕ್ಸ್‌ಫರ್ಡ್ ಆಂಗ್ಲ ಮಾಧ್ಯಮ ಪ್ರೌಢಶಾಲೆ'ಯಲ್ಲಿ ಓದಿದೆ. ಟ್ಯೂಷನ್ ತೆಗೆದುಕೊಳ್ಳಲಿಲ್ಲ. ಶಾಲೆಯಲ್ಲಿ ಮಾಡಿದ ಪಾಠವನ್ನೇ ಅವಲಂಬಿಸಿ, ಶಿಕ್ಷಕರ ಮಾರ್ಗದರ್ಶನದಲ್ಲಿಯೇ ನನ್ನ ಓದನ್ನು ರೂಪಿಸಿಕೊಂಡೆ. ಹೆಚ್ಚು ಅಂಕ ಗಳಿಸಲು ನಾನು ಹಾಕಿಕೊಂಡ ವೇಳಾಪಟ್ಟಿ ಸಹಾಯ ಮಾಡಿತು. ಶಾಲೆ ಆರಂಭ ಆದ ದಿನದಿಂದಲೂ ಅಂದಿನ ಪಾಠವನ್ನು ಅಂದೇ ಓದುವ ಅಭ್ಯಾಸ ಇಟ್ಟುಕೊಂಡಿದ್ದೆ.

ಓದುವುದಕ್ಕಾಗಿ ವಿಶೇಷ ಸಿದ್ಧತೆ ಏನೂ ಮಾಡಿಕೊಳ್ಳಲಿಲ್ಲ. ರಾತ್ರಿಯೆಲ್ಲ ಕಷ್ಟಪಟ್ಟು ಓದುವುದು ಆರೋಗ್ಯದ ಮೇಲೆ ತೊಂದರೆ ಆಗಬಹುದು. ಅದರಿಂದ ಹೆಚ್ಚಿನ ಅಂಕ ಕೂಡ ಬರುವುದಿಲ್ಲ. ಓದು ಅರ್ಥ ಮಾಡಿಕೊಳ್ಳಲು ಕ್ಲಾಸ್‌ನಲ್ಲಿ ಗಮನ ಇಟ್ಟು ಪಾಠ ಕೇಳಬೇಕು. ಅವತ್ತಿನ ಕೆಲಸವನ್ನು ಅವತ್ತೇ ಮುಗಿಸಬೇಕು. ಏಕಾಗ್ರತೆಯಿಂದ ಓದುವುದು ಹೆಚ್ಚು ಪರಿಣಾಮಕಾರಿ ಆಗಬಲ್ಲುದು.

ಅಪ್ಪ–ಅಮ್ಮ ಊರಲ್ಲಿದ್ದರು. ವಾರಕ್ಕೆ ಒಮ್ಮೆ ಫೋನ್ ಮಾಡುತ್ತಿದ್ದೆ. ಚೆನ್ನಾಗಿ ಓದು ಅಂತ ಹೇಳ್ತಾ ಇದ್ರು. ಶಾಲೆಯಲ್ಲಿ ಬೋರ್ಡ್ ಪರೀಕ್ಷೆ ರೀತಿಯಲ್ಲೇ ಟೆಸ್ಟ್‌ಗಳನ್ನು ಮಾಡುತ್ತಿದ್ದರು. ಅದು ನನ್ನ ಪರೀಕ್ಷಾ ಸಿದ್ಧತೆಗೆ ಸಹಾಯ ಮಾಡಿತು. ಹಾಸ್ಟೆಲ್‌ನಲ್ಲಿ ನನ್ನ ಸ್ನೇಹಿತರೂ ಹುರಿದುಂಬಿಸುತ್ತಿದ್ದರು. ನಿರಂತರವಾಗಿ ಮಾದರಿ ಪರೀಕ್ಷೆಗಳನ್ನು ಎದುರಿಸಿದ್ದು, ವೇಳಾಪಟ್ಟಿ ಹಾಕಿಕೊಂಡು ಓದಿದ್ದು ಒಳ್ಳೆಯ ರ‍್ಯಾಂಕ್‌ಗೆ ಸಹಕಾರಿ ಆಯಿತು.

